ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	328
ಮಾನ್ಯ ಸದಸ್ಯರ ಹೆಸರು	:	ಶ್ರೀ ಎಂ. ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ವಿಷಯ	:	ಪ್ರವಾಸೋದ್ಯಮ ಅಭಿವೃದ್ಧಿ ಕುರಿತು.
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.
ಉತ್ತರಿಸುವ ದಿನಾಂಕ:	:	06-03-2020.

ಕ್ರ.ಸ	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?	ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.
ಆ)	ಹಾಸನ ಜಿಲ್ಲೆಯಲ್ಲಿ ಪ್ರವಾಸಿಗರು ಉಳಿದುಕೊಳ್ಳಲು ಇಲಾಖೆ ವತಿಯಿಂದ ಎಷ್ಟು ಯಾತ್ರಿ ನಿವಾಸಗಳನ್ನು ನಿರ್ಮಿಸಲಾಗಿದೆ; (ವಿವರ ನೀಡುವುದು)	ಹಾಸನ ಜಿಲ್ಲೆಯಲ್ಲಿ ಪ್ರವಾಸಿಗರು ಉಳಿದುಕೊಳ್ಳಲು ಇಲಾಖೆ ವತಿಯಿಂದ 10 ಯಾತ್ರಿ ನಿವಾಸಗಳನ್ನು ನಿರ್ಮಿಸಲಾಗಿರುತ್ತದೆ. ವಿವರವನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.
ಇ)	ಟೂರಿಸ್ಟ್ ಟ್ಯಾಕ್ಸಿಗೆ ನೀಡಲಾಗುತ್ತಿರುವ ಸಹಾಯಧನದ ಮೊತ್ತವೆಷ್ಟು; ಅನುಸರಿಸುತ್ತಿರುವ ಮಾನದಂಡಗಳೇನು;	ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತವರ್ಗಕ್ಕೆ ಸೇರಿದ ನಿರುದ್ಯೋಗಿ ಯುವಕ/ಯುವತಿಯವರಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸಲು 2017-18ನೇ ಸಾಲಿನಿಂದ ರೂ.3.00 ಲಕ್ಷಗಳನ್ನು ಸಹಾಯಧನವಾಗಿ ನೀಡಲಾಗುತ್ತಿದ ಅನುಸರಿಸುತ್ತಿರುವ ಮಾನದಂಡಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ.
ಈ)	ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ಎಷ್ಟು ಜನ ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ ಸೌಲಭ್ಯವನ್ನು ನೀಡಲಾಗಿದೆ? (ವಿವರಗಳನ್ನು ನೀಡುವುದು)	ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿಒಟ್ಟು178 ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ ಸೌಲಭ್ಯವನ್ನು ಒದಗಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ವರ್ಗವಾರು	2016-17	2017-18	2018-19
ಪರಿಶಿಷ್ಠ ಜಾತಿ,	33	16	17
ಪರಿಶಿಷ್ಠ ಪಂಗಡ,	01	03	04
ಹಿಂದುಳಿದ ವರ್ಗ ಅಲ್ಪಸಂಖ್ಯಾಂತ ವರ್ಗಕ್ಕೆ	62	28	14
ಒಟ್ಟು :	96	47	35

ಕಡತ ಸಂಖ್ಯೆ: ಟಿಓಆರ್ 29 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಅನುಬಂಧ-1

ಕಳೆದ 03 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮ/ ಯೋಜನೆ/ ಕಾಮಗಾರಿಗಳ ವಿವರ

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ಸಾಲು	ಅಂದಾಜು ಮೊತ್ತ
1.	ಹಾಸನ ಜಿಲ್ಲೆಯ ಅರಸೀಕೆರೆ ತಾ॥ ಬಾಣವಾರದ ಗವಿಮಠದ ಬಳಿ ಯಾತ್ರಿನಿವಾಸ ನಿರ್ಮಾಣ	2016-17	25.00
2.	ಹಾಸನ ಜಿಲ್ಲೆಯ ಹಾಗೂ ತಾಲ್ಲೂಕಿನ ಮರ್ಕುಲಿ ಗ್ರಾಮದ ಶ್ರೀ.ಆದಿನಾಥ ದೇವಸ್ಥಾನದ ಸಂರಕ್ಷಣಾ ಕಾಮಗಾರಿ.	2016-17	65.00
3.	ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಹಳೆಬೆಳಗೊಳದ ಶ್ರೀ. ಪಾರ್ಶ್ವನಾಥ ದೇವಸ್ಥಾನದ ಸಂರಕ್ಷಣಾ ಕಾಮಗಾರಿ.	2016-17	86.00
4.	ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಜೀನನಾತಪುರದ ಶಾಂತಿನಾಥ ದೇವಸ್ಥಾನದ ಸಂರಕ್ಷಣಾ ಕಾಮಗಾರಿ.	2016-17	18.00
5.	ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಹಳೆಬೆಳಗೊಳದ ಪುಷ್ಕರಣಿ ದೇವಸ್ಥಾನದ ಸಂರಕ್ಷಣಾ ಕಾಮಗಾರಿ.	2016-17	14.00
6.	ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಹಳೇಬೀಡು ಪಟ್ಟಣದ ಶ್ರೀ.ಮುತ್ತಿನ ವೀರಭದ್ರೇಶ್ವರಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ.	2016-17	85.00
7.	ಅರಕಲಗೂಡು ತಾಲ್ಲೂಕು ಕೊಣನೂರು ಹೋಬಳಿ, ಹಂಡ್ರಂಗಿ ಗ್ರಾಮದಲ್ಲಿರುವ ಹಜರತ್ ಜಮಾಲ್‌ಬಿ ಅಮ್ಮನವರ ದರ್ಗಾದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ	2017-18	25.00
8.	ಹಳೇಬೀಡಿನ ಸಮೀಪದಲ್ಲಿ ಪುಷ್ಪಗಿರಿ ಮಹಾ ಸಂಸ್ಥಾನದಲ್ಲಿ ಪ್ರವಾಸಿ ಸೌಲಭ್ಯ ಕಾಮಗಾರಿ	2017-18	50.00
9.	ಅರಸೀಕೆರೆ ತಾಲ್ಲೂಕು ಜಾವಗಲ್ ಹೋಬಳಿ ದೇಶಾಣಿ ಗ್ರಾಮದಲ್ಲಿರುವ ಶ್ರೀ.ಹೋತನ ಕಲ್ಲಮ್ಮ ದೇವಾಲಯದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ	2017-18	25.00
10.	ಅರಸೀಕೆರೆ ತಾಲ್ಲೂಕು ಜಾವಗಲ್ ಹೋಬಳಿ ಕರಗುಂದ ಗ್ರಾಮದಲ್ಲಿರುವ ಶ್ರೀ.ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ	2017-18	25.00
11.	ಹಾಸನ ಜಿಲ್ಲೆಯ ಹಿರೀಸಾವೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎನ್.ಹೆಚ್.-75 ರಿಂದ ತೂಬಿನಕೆರೆಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ.	2017-18	40.00
12.	ಹೊಳಲ್ಕೆರೆ ಗ್ರಾಮದ ಶ್ರೀ.ಮುಕ್ಕಣ್ಣೇಶ್ವರಿ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವಕಾಮಗಾರಿ	2018-19	50.00
13.	ಭೈರಾಂಬುದಿ ಗ್ರಾಮದ ಶ್ರೀ.ಹೊಂಗ್ಯಮ್ಮ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವ ಕಾಮಗಾರಿ	2018-19	50.00
14.	ಬಾಗಿಲಘಟ್ಟ ಗ್ರಾಮದ ಶ್ರೀ.ಆಂಜನೇಯಸ್ವಾಮಿ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ 1ಕಾಂಕ್ರೀಟ್ ಅಳವಡಿಸುವ ಕಾಮಗಾರಿ	2018-19	50.00
15.	ಜಾಜೂರು ಗ್ರಾಮದ ಶ್ರೀ.ಹೊನ್ನಾಲದಮ್ಮ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವ ಕಾಮಗಾರಿ	2018-19	50.00
16.	ಬಾಳೇನಹಳ್ಳಿ ಗ್ರಾಮದ ಶ್ರೀ ಬಯಲು ಬಸವೇಶ್ವರ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವ ಕಾಮಗಾರಿ	2018-19	50.00
17.	ಅರಕಲಗೂಡು ಶ್ರೀ.ರಾಮನಾಥೇಶ್ವರ ಹಾಗೂ ಶ್ರೀ.ಸುಬ್ರಮಣ್ಯ ದೇವಾಲಯಗಳ ಬಳಿ ಹೈಟೆಕ್ ಶೌಚಾಲಯ ನಿರ್ಮಾಣ (ತಲಾ ರೂ.25.00ಲಕ್ಷ) ಕಾಮಗಾರಿ	2018-19	50.00
18.	ಚನ್ನರಾಯಪಟ್ಟಣ ತಾಲ್ಲೂಕು ಬೂಕನಬೆಟ್ಟ ಶ್ರೀ.ರಂಗನಾಥಸ್ವಾಮಿ ದೇವಸ್ಥಾನ ಹತ್ತಿರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿ	2018-19	100.00
19.	ಚನ್ನರಾಯಪಟ್ಟಣ ತಾಲ್ಲೂಕು ನವಿಲೆ ನಾಗೇಶ್ವರ ದೇವಾಲಯ ನವಿಲೆ ಕ್ಷೇತ್ರದ ಬಳಿ ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿ	2018-19	100.00
20.	ಬೆಟ್ಟದ ಭೈರವೇಶ್ವರ ದೇವಸ್ಥಾನದ ಬಳಿ ವೀಕ್ಷಣಾ ಕೇಂದ್ರ ನಿರ್ಮಾಣ ಹಾಗೂ ಇತರೆ ಮೂಲಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ	2018--19	75.00

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ಸಾಲು	ಅಂದಾಜು ಮೊತ್ತ
21.	ಅರಸೀಕೆರೆ ತಾಲ್ಲೂಕು, ಕಣಕಟ್ಟೆಯಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ	2018–19	50.00
22.	ಬೇಲೂರು ತಾಲ್ಲೂಕು, ಹಳೇಬೀಡು ದೇವಾಲಯಕ್ಕೆ ಹೈಟೆಕ್ ಶೌಚಾಲಯ ನಿರ್ಮಾಣ (ಪಾರ್ಕಿಂಗ್ ಬಳಿ) ಕಾಮಗಾರಿ	2018–19	25.00
23.	ಅರಸೀಕೆರೆ ನಗರದ ಹೊರವಲಯದಲ್ಲಿ ಮಹ್ಹಾತ್ಮ ಗಾಂಧೀಜಿ ಚಿತಾಬಸ್ಮ ಸ್ಮಾರಕವಿರುವ ಕಸ್ತೂರ ಬಾ ಶಿಬಿರದ ಯಾತ್ರಿ ನಿವಾಸಕಾಮಗಾರಿ	2018–19	50.00
24.	ಹೊಳೆನರಸೀಪುರ ತಾಲ್ಲೂಕು, ಹೊಳೆನರಸೀಪುರದಲ್ಲಿರುವ ಕೋಟೆ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ ಸಂರಕ್ಷಣಾ ಕಾಮಗಾರಿ	2018–19	233.00
25.	ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ವಿಷ್ಣು ಸಮುದ್ರ (ಕೆರೆಸಂತೆ)ದಲ್ಲಿರುವ ಶ್ರೀ.ಅಮೃತೇಶ್ವರ ಹಾಗೂ ಮಂಟಪಗಳ ಸಂರಕ್ಷಣಾ ಕಾಮಗಾರಿ	2018–19	175.00
26.	ಮೂಕನಮನೆ ಪಾಲ್ಸ್ ವೀಕ್ಷಣಾ ಕೇಂದ್ರ ನಿರ್ಮಾಣ ಹಾಗೂ ಇತರೆ ಮೂಲಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ	2018–19	75.00
27.	ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ರಂಗನಾಥಸ್ವಾಮಿ ಬೆಟ್ಟದಲ್ಲಿ ಯಾತ್ರಿನಿವಾಸಕ್ಕೆ ಹೆಚ್ಚುವರಿ ಕಾಮಗಾರಿ	2018–19	63.00
28.	ಮರಗೂರು ಶ್ರೀ.ಶಂಭುಲಿಂಗೇಶ್ವರ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಕಾಮಗಾರಿ	2018–19	50.00
29.	ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ ಎನ್.ಹೆಚ್.234 ರಿಂದ ಭದ್ರಕಾಳಿ ಬನ ರಸ್ತೆ (9.5 ಕಿ.ಮೀ) ಅಭಿವೃದ್ಧಿ ಕಾಮಗಾರಿ.	2018–19	490.00
30.	ಬೇಲೂರು ತಾಲ್ಲೂಕು ದೊಡ್ಡಕೊಂಡ್ಲೆ ರಂಗನಾಥಸ್ವಾಮಿ ದೇವಸ್ಥಾನದ ಬಳಿ ಮೂಲ ಸೌಲಭ್ಯ ಕಾಮಗಾರಿ	2018–19	100.00
31.	ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಪುಣ್ಯಕ್ಷೇತ್ರ ರಾಮನಾಥಪುರ ಅಭಿವೃದ್ಧಿ ಕಾಮಗಾರಿ	2018–19	100.00
32.	ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ಪ್ರಸಿದ್ದ ಅರಸೀಕಟ್ಟೆಯಮ್ಮ ದೇವಸ್ಥಾನದ ಕ್ಷೇತ್ರಾಭಿವೃದ್ಧಿ ಕಾಮಗಾರಿ	2018–19	100.00
33.	ಹಿರಿಯೂರು ಗ್ರಾಮದ ಶ್ರೀ.ರೇವಣ್ಣಸಿದ್ದೇಶ್ವರ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವಕಾಮಗಾರಿ	2018–19	50.00
34.	ಕುಂಡುಕುಂದಿ ಗ್ರಾಮದ ಶ್ರೀ.ಕುಂಟುಮಾರಮ್ಮ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವಕಾಮಗಾರಿ	2018–19	50.00
35.	ಚೀಲನಹಳ್ಳಿ ಗ್ರಾಮದ ಶ್ರೀ ಶನಿದೇವರ ದೇವಸ್ಥಾನಕ್ಕೆ ರಸ್ತೆ ಮತ್ತು ಆವರಣದಲ್ಲಿ ಕಾಂಕ್ರೀಟ್ ಅಳವಡಿಸುವಕಾಮಗಾರಿ	2018–19	50.00

ಅನುಬಂಧ–2

ಹಾಸನ ಜಿಲ್ಲೆಯಲ್ಲಿ ಪ್ರವಾಸಿಗರು ಉಳಿದುಕೊಳ್ಳಲು ಇಲಾಖೆ ವತಿಯಿಂದ ನಿರ್ಮಿಸಿರುವ ಯಾತ್ರಿನಿವಾಸಗಳ ವಿವರ

ಕ್ರ. ಸಂ.	ಯಾತ್ರಿನಿವಾಸದ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ
1.	ಹಾಸನ ನಗರದಲ್ಲಿರುವ ಸುಮುಖ ಯಾತ್ರಿನಿವಾಸ	1995–96	ರೂ.94.67 ಲಕ್ಷ
2.	ಅರಕಲಗೂಡು ತಾಲ್ಲೂಕು ರಾಮನಾಥಪುರ ಶ್ರೀ.ರಾಮೇಶ್ವರ ದೇವಾಲಯದ ಬಳಿ ಯಾತ್ರಿನಿವಾಸ	2009–10	50.00 ಲಕ್ಷ
3.	ಅರಕಲಗೂಡು ತಾಲ್ಲೂಕು ಹುಲಿಕಲ್ ಶ್ರೀ.ವೆಂಕಟರಮಣ ದೇವಾಲಯದ ಬಳಿ ಯಾತ್ರಿನಿವಾಸ	2009–10	50.00 ಲಕ್ಷ
4.	ಅರಕಲಗೂಡು ತಾಲ್ಲೂಕು ರುದ್ರಪಟ್ಟಣ ಗ್ರಾಮದ ಸಪ್ತಸ್ವರ ದೇವತಾ ಮಂದಿರದ ಬಳಿ ಯಾತ್ರಿನಿವಾಸ	2014–15	ರೂ.60.00 ಲಕ್ಷ
5.	ಅರಸೀಕೆರೆ ತಾಲ್ಲೂಕು ಮಾಲೇಕಲ್ ತಿರುಪತಿ ದೇವಾಲಯದ ಬಳಿ ಯಾತ್ರಿನಿವಾಸ	2009–10	50.00 ಲಕ್ಷ
6.	ಅರಸೀಕೆರೆ ತಾಲ್ಲೂಕು ಜಾವಗಲ್ ಶ್ರೀ.ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಹತ್ತಿರ ಯಾತ್ರಿನಿವಾಸ	2014–15	ರೂ.75.00 ಲಕ್ಷ
7.	ಹೊಳೆನರಸೀಪುರ ತಾಲ್ಲೂಕು ಹಳೇಕೋಟೆ ಶ್ರೀ.ರಂಗನಾಥಸ್ವಾಮಿ ಬೆಟ್ಟದಲ್ಲಿ ಶ್ರೀ.ರಂಗನಾಥಸ್ವಾಮಿ ದೇವಾಲಯದ ಯಾತ್ರಿನಿವಾಸ	2011–12	120.00 ಲಕ್ಷ
8.	ಬೇಲೂರು ತಾಲ್ಲೂಕು ಹಳೇಬೀಡು ಪುಷ್ಪಗಿರಿಯಲ್ಲಿರುವ ಶ್ರೀಮಠದ ಬಳಿ ಯಾತ್ರಿನಿವಾಸ	2012–13	ರೂ.50.00 ಲಕ್ಷ
9.	ಚನ್ನರಾಯಪಟ್ಟಣ ತಾಲ್ಲೂಕು ಶ್ರವಣಬೆಳಗೊಳದ ಯಾತ್ರಿನಿವಾಸ	1993–94 ಕೆಳಮಹಡಿ	ರೂ.100.00
		2005–06 ಮೇಲ್ ಮಹಡಿ	ರೂ.100.00
10.	ಆಲೂರು ತಾಲ್ಲೂಕು ತಾಳೂರು ಗ್ರಾಮದ ಹನುಮಂತರಾಯಸ್ವಾಮಿ ದೇವಾಲಯದ ಬಳಿ ಡಾರ್ಮಿಟರಿ	2012–13	ರೂ.40.00 ಲಕ್ಷ

ಅನುಬಂಧ-3

ಟೂರಿಸ್ಟ್ ಟ್ಯಾಕ್ಸಿಗೆ ನೀಡಲು ಅನುಸರಿಸುತ್ತಿರುವ ಮಾನದಂಡಗಳ ವಿವರ

ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು :

ಅ) ಅರ್ಜಿ ಸಲ್ಲಿಸುವವರು ಹಾಸನ ಜಿಲ್ಲೆಯ ನಿವಾಸಿಯಾಗಿರಬೇಕು.

ಆ) ಅರ್ಜಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.

ಇ) ಅರ್ಜಿದಾರರನ ವಯಸ್ಸು 20 ರಿಂದ 40 ವರ್ಷದೊಳಗಿರಬೇಕು.

ಈ) ಅರ್ಜಿದಾರರು 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಉ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಟ ಒಂದು ವರ್ಷ ಪೂರ್ಣಗೊಂಡಿರಬೇಕು. ಹಾಗೂ (ಎಂ.ಕ್ಯಾಬ್ ಬ್ಯಾಡ್ಜ್) ಬ್ಯಾಡ್ಜ್ ಅನ್ನು ಹೊಂದಿರಬೇಕು.

ಊ) ಅರ್ಜಿದಾರನು ಹಾಗೂ ಕುಟುಂಬದ ಯಾವೊಬ್ಬ ಸದಸ್ಯನು ಯಾವುದೇ ಸರ್ಕಾರಿ ಇಲಾಖೆಯಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ನೌಕರಿಯಲ್ಲಿರಬಾರದು.

ಋ) ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ಇರುವುದಿಲ್ಲ. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ

ಅ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.2.00 ಲಕ್ಷಗಳು ಮೀರಬಾರದು.

ಆ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.1.50 ಲಕ್ಷಗಳು ಮೀರಬಾರದು.

3. ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗದವರಿಗೆ

ಅ) ನಗರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.55,000 ಗಳು ಮೀರಬಾರದು.

ಆ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳ ವಾರ್ಷಿಕ ಆದಾಯ ರೂ.40,000 ಗಳು ಮೀರಬಾರದು.

ಆಯ್ಕೆ ವಿಧಾನ:-

- ಫಲಾನುಭವಿಗಳ ಆಯ್ಕೆಯಲ್ಲಿ ಅಭ್ಯರ್ಥಿಯ ವಯಸ್ಸು ಹಾಗೂ ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕದ ಶೇಕಡ (%) ಎರಡರ ಆಧಾರದ ಮೇಲೆ ಕ್ರಮವಾಗಿ 60 ಮತ್ತು 40 ಆದ್ಯತೆಯನ್ನು ನೀಡಿ ಈ ಕೆಳಕಂಡ ಮಾನದಂಡಗಳ ಮೂಲಕ ಆಯ್ಕೆ ಮಾಡುವುದು.

1. **ಅಭ್ಯರ್ಥಿಯ ವಯಸ್ಸಿನ ಜೇಷ್ಠತೆ ಮೇರೆಗೆ:-**

ಸೂತ್ರ = ಅಭ್ಯರ್ಥಿಯ ವಯಸ್ಸು x 100 / ನಿಗಧಿಪಡಿಸಿದ ವಯಸ್ಸು (40)

= ಬರುವ ಫಲಿತಾಂಶ x 60 / 100 = ಅಭ್ಯರ್ಥಿಯ ವಯಸ್ಸಿನ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (A)

2. **ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ:-**

ಸೂತ್ರ = ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಯು ಪಡೆದ ಒಟ್ಟು ಅಂಕಗಳ ಶೇಕಡ x 100 / ನಿಗಧಿಪಡಿಸಿರುವ ಅಂಕದ ಮಿತಿ(45%)

= ಬರುವ ಫಲಿತಾಂಶ x 40 / 100 = ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ

ಅಭ್ಯರ್ಥಿಯ ವಯಸ್ಸಿನ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ (A)	+	**ಎಸ್.ಎಸ್.ಎಲ್.ಸಿ ಯಲ್ಲಿ ಪಡೆದ ಅಂಕಗಳ ಜೇಷ್ಟತೆ ಮೇರೆಗೆ ಪಡೆದ ಫಲಿತಾಂಶ(B)**	=	**ಅಭ್ಯರ್ಥಿ ಪಡೆಯುವ ಒಟ್ಟು ಶೇಕಡವಾರು ಫಲಿತಾಂಶ**

ಅಭ್ಯರ್ಥಿಯು ಪಡೆಯುವ ಒಟ್ಟು ಶೇಕಡವಾರು ಫಲಿತಾಂಶದ ಏರಿಕೆಯಿಂದ ಇಳಿಕೆ ಕ್ರಮದಲ್ಲಿ (Descending Order) ಬರುವ ಶೇಕಡವಾರು ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

3. ಮಹಿಳೆಯರಿಗೆ ಶೇ.10%ರಷ್ಟು ಗುರಿಗಳನ್ನು ಮೀಸಲಿರಿಸುವುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ ಪುರುಷ ಅಭ್ಯರ್ಥಿಗಳಿಗೆ ಸದರಿ ಗುರಿಗಳನ್ನು ಹಂಚಿಕೆ ಮಾಡಿ ಆಯ್ಕೆ ಮಾಡತಕ್ಕದ್ದು.

ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು

- ನಿಯಮ ರೀತ್ಯ ಮಹಿಳೆಯುರು ಅರ್ಜಿ ಸಲ್ಲಿಸಿದ್ದಲ್ಲಿ ಆದ್ಯತೆ ನೀಡಬಹುದಾಗಿದೆ.
- ಬಿ.ಪಿ.ಎಲ್ ರೇಖೆಗಿಂತ ಕೆಳತರುವವರಿಗೆ ಆದ್ಯತೆ ನೀಡತಕ್ಕದ್ದು.
- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವ್ವದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು. ಕುಟುಂಬದ ಸದಸ್ಯನು ವಿವಾಹವಾಗಿ ಪ್ರತ್ಯೇಕವಾಗಿ ವಾಸವಿದ್ದಲ್ಲಿ, ಅರ್ಜಿ ಸಲ್ಲಿಸಲು ಅವಕಾಶ ನೀಡಬಹುದಾಗಿದೆ.